ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 1096/20**

ಪಿಡಬ್ಲ್ಯುಃ – 11

ಸಿಡಬ್ಲ್ಯುಃ – 13

ದಿನಾಂಕಃ 09.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ-ಆರೋಪಿತರ ಪರ ವಕೀಲರಾದ ಶ್ರೀ. ಕೆ ಎಂ ರವರಿಂದಃ-

ಚಾಸಾ-1 ರವರ ಹೇಳಿಕೆಯನ್ನು ನಾನೇ ದಾಖಲು ಮಾಡಿರುತ್ತೇನೆ ಎಂದರೆ ಸರಿ. ನಿಮ್ಮ ತನಿಖೆಯ ಪ್ರಕಾರ ಈ ಗಲಾಟೆ ಯಾವ ವಿಚಾರವಾಗಿ ಆಗಿರುತ್ತದೆ ಎಂದರೆ ಸಾಕ್ಷಿಯು ಚರಂಡಿ ವಿಚಾರವಾಗಿ ಆಗಿರುತ್ತದೆ ಎನ್ನುತ್ತಾರೆ. ನಿಪಿ-2 ರಲ್ಲಿ, ಪುಟ 7 ರಲ್ಲಿ 16ನೇ ಸಾಲಿನಿಂದ ನಾನು ಈ ರೀತಿ "ಫಿರ್ಯಾದಿಯವರು ತೋಟದೊಳಗೆ ಸಣ್ಣ ಚರಂಡಿಯನ್ನು ತೆಗೆದು ಆರೋಪಿಗಳ ಮನೆಯ ಅಂಗಳಕ್ಕಾಗಿ ನೀರು ಹಾದು ಹೋಗಿ ಕೆಳಗೆ ರಸ್ತೆಗೆ ಹೋಗಲು ಮಾಡಿದ್ದನ್ನು ಆರೋಪಿಗಳು ಚರಂಡಿಯನ್ನು ಮುಚ್ಚಿ ನೀರು ಫಿರ್ಯಾದಿಯ ಮನೆ ಕಡೆಗೆ ಹೋಗುವಂತೆ ಮಾಡಿರುತ್ತಾರೆ ಎಂದು ಫಿರ್ಯಾದಿಯರು ತಿಳಿಸಿರುತ್ತಾರೆ" ಎಂದು ನೀವು ನಮೂದು ಮಾಡಿದ್ದೀರಿ, ನೀವೇನಾದರು ಖುದ್ದು ಘಟನಾ ಸ್ಥಳಕ್ಕೆ ಹೋಗಿ ಚರಂಡಿಯನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಹೌದು ಚರಂಡಿಯನ್ನು ಪರಿಶೀಲನೆ ಮಾಡಿದ್ದೇನೆ. ನಾನು ಪರಿಶೀಲಿಸಿದ ಚರಂಡಿಯು ಯಾವ ಸರ್ವೆ ನಂಬರ್ ನಲ್ಲಿ ಇತ್ತು ಎಂದರೆ ಸಾಕ್ಷಿಯು ಸದರಿ ಚರಂಡಿ ಯಾವ ಸರ್ವೆ ನಂಬರ್ ನಲ್ಲಿ ಇತ್ತು ಎಂದು ನಾನು ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ ಎನ್ನುತ್ತಾರೆ. ಸದರಿ ಚರಂಡಿ ಎಷ್ಟು ಉದ್ದ, ಅಗಲ, ಆಳ ಇತ್ತು ಎಂದು ನೀವೇನಾದರು ನಿಪಿ-2 ರಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಚರಂಡಿಯಿಂದ ಚಾಸಾ-1 ರವರಿಗಾಗಲಿ, ಆರೋಪಿಗಳಿಗಾಗಲಿ ಯಾವ ರೀತಿ ಅಡಚಣೆ ಆಗಿತ್ತು ಎಂದು ನೀವೇನಾದರೂ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಚರಂಡಿಯ ಬಗ್ಗೆ ನಿಪಿ-2 ರ ಚೆಕ್ಕುಬಂಧಿಯಲ್ಲಿ ಕೂಡ ನಾನು ಬರೆದಿಲ್ಲ ಎಂದರೆ ಸರಿ. ನಿಪಿ-2 ಮಹಜರು ಮಾಡುವ ಕಾಲಕ್ಕೆ ನಾನು ಪಂಚರನ್ನು ಮೌಖಿಕವಾಗಿ ಬರ ಮಾಡಿಕೊಂಡಿರುತ್ತೇನೆ, ಅವರಿಗೆ ನೋಟಿಸನ್ನು ನೀಡಿರುವುದಿಲ್ಲ. ಚಾಸಾ-2 ಮತ್ತು 3 ರವರ ತಂದೆಯ, ಗಂಡನ ಹೆಸರನ್ನು ಯಾವ ಆಧಾರದ ಮೇಲೆ ನಿಪಿ-2 ರಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿಯು ಚಾಸಾ-2 ಮತ್ತು 3 ರವರು ಮೌಖಿಕವಾಗಿ ತಿಳಿಸಿದಂತೆ ನಾನು ನಮೂದು ಮಾಡಿದ್ದೇನೆ ಎನ್ನುತ್ತಾರೆ. ಚಾಸಾ-3 ರವರಿಗೆ ನಾನು ಮಹಜರಿಗೆ ಪಂಚರಾಗಬೇಕೆಂದು ಹೇಳಿ

ನೋಟಿಸ್ ನೀಡಿಲ್ಲ. ಚಾಸಾ-2 ಮತ್ತು 3 ರವರ ತಂದೆ ಮತ್ತು ಗಂಡನ ಹೆಸರನ್ನು ತಿಳಿದುಕೊಳ್ಳಲು ನಾನು ಯಾವುದೇ ಅವರ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ. ನಾನು ಚಾಸಾ-2 ಮತ್ತು 3 ರವರ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ನಿಪಿ-2 ರಂತೆ ಸ್ಥಳದಲ್ಲಿ ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಅಂತಿಮ ವರದಿಯಲ್ಲಿ ಸಾಕ್ಷಿಯಾಗಿ ನಮೂದು ಮಾಡಿರುವ ವ್ಯಕ್ತಿಗಳೇ ಬೇರೆ, ನಿಪಿ-2 ರಲ್ಲಿ ಸಾಕ್ಷಿಗಳ ಸಹಿ ಪಡೆದಿರುವ ವ್ಯಕ್ತಿಗಳೇ ಬೇರೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ಚಾಸಾ-2 ಮತ್ತು 3 ರವರ ಸಹಿಗಳನ್ನು ನಾನು ಠಾಣೆಯಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ದಿಃ 06.08.2020 ರಂದು ಸದರಿ ಘಟನೆ ನಡೆದಿರುತ್ತದೆ. ಆರೋಪಿಗಳಿಗೆ ಮುದ್ದೆ ಮಾಲನ್ನು ಹಾಜರು ಪಡಿಸುವಂತೆ ನಾನು ನೋಟಿಸ್ ನೀಡಿರುತ್ತೇನೆ ಎಂದು ಹೇಳಿದ್ದೀರಿ, ಯಾವ ದಿನಾಂಕದಂದು ನೋಟಿಸ್ ನೀಡಿದ್ದೀರಿ ಎಂದರೆ ಸಾಕ್ಷಿಯು ನಾನು ಆ ರೀತಿ ನೋಟಿಸ್ ನೀಡಿಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಮು. ಮಾ-1 ಮತ್ತು 2 ನ್ನು ನಿಮ್ಮ ಮುಂದೆ ಹಾಜರು ಪಡಿಸಿದರು ಎಂದರೆ ದಿಃ08.08.2020 ರಂದು ಹಾಜರು ಪಡಿಸಿರುತ್ತಾರೆ. ದಿಃ 08.08.2020 ಕ್ಕೆ ಆರೋಪಿಗಳು ನ್ಯಾಯಾಲಯದಿಂದ ಪಡೆದ ಜಾಮೀನು ಆದೇಶವನ್ನು ನಿಮ್ಮ ಮುಂದೆ ತಂದು ಹಾಜರುಪಡಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿಃ 08.08.2020 ರಂದು ಆರೋಪಿಗಳು ನನ್ನ ಮುಂದೆ ಹಾಜರಾದಾಗ ನಾನು ಸೆಕ್ಷನ್ 41(ಎ) ಸಿ ಆರ್ ಪಿ ಸಿ ಅಡಿಯನ್ನು ನೋಟಿಸ್ ಜಾರಿ ಮಾಡಿರುತ್ತೇನೆ, ಆರೋಪಿಗಳಿಂದ ಮುಚ್ಚಳಿಕೆ ಬರೆಸಿಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಿಲ್ಲ. ನಿಪಿ-12 ಮಾಡುವ ಕಾಲಕ್ಕೆ ಪಂಚ ಸಾಕ್ಷಿಗಳನ್ನು ನೀವು ಯಾವ ರೀತಿ ಕರೆಸಿಕೊಂಡಿರಿ ಎಂದರೆ ಸಾಕ್ಷಿಯು ನಾನು ಮೌಖಿಕವಾಗಿ ಅವರನ್ನು ಬರಮಾಡಿಕೊಂಡೆ ಎನ್ನುತ್ತಾರೆ. ನಿಪಿ-12 ಕ್ಕೆ ಪಂಚರಾಗಿ ಸಹಿ ಮಾಡಿರುವ ಇಬ್ಬರು ಸಾಕ್ಷಿಗಳು ಹೊಸಕೇರಿ ಗ್ರಾಮದವರು. ಹೊಸಕೇರಿ ಗ್ರಾಮ ನಮ್ಮ ಠಾಣೆಯಿಂದ ಸುಮಾರು 20 ಕಿ ಮೀ ದೂರದಲ್ಲಿ ಇದೆ ಎಂದರೆ ಸರಿ. ನಿಪಿ-12 ಮಹಜರನ್ನು ನಾನು ನನಗೆ ಬೇಕಾದ ಹಾಗೆ ಯಾವಾಗಲೋ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಮು. ಮಾ.1 ಮತ್ತು 2 ನ್ನು ನಾನು ಸಾಕ್ಷಿಗಳ ಸಮಕ್ಷಮ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮು. ಮಾ.1 ಮತ್ತು 2 ಕ್ಕೂ ಸಂಬಂಧ ಇಲ್ಲ , ಆರೋಪಿಗಳೂ ಎಂದಿಗೂ ಮು ಮಾ 1 ಮತ್ತು 2 ನ್ನು ನನ್ನ ಸಮಕ್ಷಮ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಮಡಿಕೇರಿಯಲ್ಲಿರುವ ಅಶ್ವಿನಿ ಆಸ್ಪತ್ರೆ ನನಗೆ ಗೊತ್ತು. ಸದರಿ ಆಸ್ಪತ್ರೆ ಖಾಸಗಿ ಆಸ್ಪತ್ರೆ ಎಂದರೆ ಸರಿ. ಮಡಿಕೇರಿ ಸರ್ಕಾರಿ ಜಿಲ್ಲಾ ಆಸ್ಪತ್ರೆಯಿಂದ ಅಶ್ವಿನಿ ಆಸ್ಪತ್ರೆಗೆ ಸುಮಾರು 1 ಕಿ ಮೀ ಆಗುತ್ತದೆ. ಮು. ಮಾ.1 ಮತ್ತು 2 ನ್ನು ಪರಿಶೀಲನೆ ಮಾಡಿ ವರದಿ ನೀಡುವಂತೆ ನೀವೇನಾದರು ಚಾಸಾ-12 ರವರಿಗೆ ಮನವಿ ಪತ್ರ ನೀಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಮೌಖಿಕವಾಗಿ ಅವುಗಳನ್ನು ತೆಗೆದುಕೊಂಡು ಹೋಗಿ ವರದಿ ನೀಡುವಂತೆ ಮೌಖಿಕವಾಗಿ ಚಾಸಾ-12

ರವರಿಗೆ ಕೇಳಿದ್ದೆ ಎನ್ನುತ್ತಾರೆ. ನಿಪಿ-9 ರಲ್ಲಿ ಮು. ಮಾ.1 ಮತ್ತು 2 ನ್ನು ಯಾರ ಮೂಲಕ ಸಲ್ಲಿಸಿದ್ದು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-9 ರಲ್ಲಿ ಪ್ರಕರಣ ಸಂಖ್ಯೆ ಫಿ ಎಫ್ ಸಂಖ್ಯೆ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-9 ರಲ್ಲಿ ಸದರಿ ದಾಖಲೆಯಲ್ಲಿರುವ ವಿಚಾರವನ್ನು ಯಾರು ಬರೆದರು, ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರೆಗೆ ಬರೆದರು, ಎಲ್ಲಿ ಬರೆದರು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-9 ದಾಖಲೆಯನ್ನು ನೋಡಿದಾಗ ಸದರಿ ದಾಖಲೆ ಯಾವ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ನಿಪಿ-9 ರಲ್ಲಿರುವ ಸಹಿ ಚಾಸಾ-12 ರವರದ್ದು. ಒಂದು ಖಾಲಿ ಬಿಳಿ ಹಾಳೆಯ ಮೇಲೆ ಚಾಸಾ-12 ರವರ ಸಹಿಯನ್ನು ಪಡೆದುಕೊಂಡು ನಂತರ ನನಗೆ ಬೇಕಾದ ಹಾಗೆ ಅದರಲ್ಲಿ ವಿಚಾರ ನಮೂದು ಮಾಡಿದ್ದೇನೆ ಎಂದರೆ ಸರಿಯಲ್ಲ. ಮು. ಮಾ. 1 ಮತ್ತು 2 ನ್ನು ನಾನು ಎಂದಿಗೂ ಚಾಸಾ-12 ರವರ ಬಳಿ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಚಾಸಾ-2 ಮತ್ತು ಚಾಸಾ-5 ರವರ ಹೇಳಿಕೆಗಳನ್ನು ನಾನೇ ದಾಖಲು ಮಾಡಿದ್ದೇನೆ. ಚಾಸಾ-2 ರವರ ದಿಃ 08.08.2020 ರ ಹೇಳಿಕೆಯಲ್ಲಿ, 8ನೇ ಸಾಲಿನಲ್ಲಿ "ಚಂದು ಎಂಬುವನು ಯಾವುದೇ ಗಲಾಟೆ ಮಾಡಿರುವುದಿಲ್ಲ, ಅಷ್ಟರಲ್ಲಿ ನನ್ನ ಮಗನ ಹೆಂಡತಿ ತನುಜಾರವರು ಸ್ಥಳಕ್ಕೆ ಬಂದಾಗ ಮೇಲ್ಕಂಡವರುಗಳು---------"ಎಂದು ಹೇಳಿ ಬರೆದಿದೆ ಅಷ್ಟರಲ್ಲಿ ಎಂದು ಉಪಯೋಗಿಸಿರುವ ಪದದ ಅರ್ಥ ಏನು ಎಂದರೆ ಸಾಕ್ಷಿಯು ತಕ್ಷಣ ಎಂದು ಅರ್ಥ. ಪಿ ಎಫ್ ಸಂಖ್ಯೆ 7 ರಲ್ಲಿ ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿದ್ದು, ಅದರಲ್ಲಿ ಮು. ಮಾ.1 ಮತ್ತು 2ನ್ನು ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸುವವರೆಗೂ ನಿಮ್ಮ ವಶದಲ್ಲಿ ಇಟ್ಟುಕೊಳ್ಳಲು ಅನುಮತಿ ಕೋರಿದ್ದೀರಿ, ಆ ಅವಧಿಯಲ್ಲಿ ನೀವು ಮು. ಮಾ. 1 ಮತ್ತು 2 ನ್ನು ಎಲ್ಲಿಗೂ ಸಾಗಿಸಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಅಂತಿಮ ವರದಿಯಲ್ಲಿ ನಾನು ಹೇಳಿರುವ ವಿಚಾರವೆಲ್ಲಾ ಸತ್ಯವಾಗಿರುತ್ತದೆ. ಫ್ರಾಸಾ-12 ಮತ್ತು 13 ರವರನ್ನು ನಾನು ನನ್ನ ಅಂತಿಮ ವರದಿಯ ಸಾಕ್ಷಿದಾರರ ಪಟ್ಟಿಯಲ್ಲಿ ಅವರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ. ನಾನು ಸರಿಯಾಗಿ ತನಿಖೆ ಮಾಡದೆ ಆರೋಪಿಗಳ ವಿರುದ್ಧ ಸುಳ್ಳು ಧೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.